**Spl.C. No. 3/2020.**

ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಿಶೇಷ ಪ್ರಕರಣ ಸಂಖ್ಯೆ: **3/2020**

| | | | |
|---|---|---|---|
| ಹೆಸರು | : | ಯಲ್ಲಪ್ಪ ತಳಗೇರಿ | ಫ್ರಾಸಾ-1 |
| ತಂದೆಯ ಹೆಸರು | : | ಬರಮಪ್ಪ | ಚಾಸಾ-1 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ, ತಾ. ಮುಧೋಳ | |

ದಿನಾಂಕ: 07-08-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀಮತಿ ಮನರಂಜನಿ ಟೀಕೆ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:

ಆರೋಪಿತರು ಪರಿಚಯ. ನನ್ನ ಅಣ್ಣ ವಿಠ್ಠಲ ಹಾಗೂ ಚಿಕ್ಕಪ್ಪ ಮಳೆಪ್ಪ ಇವರ ಕೊಲೆಯಾಗಿದೆ. ಚಾಸಾ-2 ರಿಂದ 4 ನಮ್ಮ ಊರಿನವರು. ಚಾಸಾ-16 ರಿಂದ 28 ನಮ್ಮ ಸಂಬಂಧಿಕರು. ಚಾಸಾ-29 ನಮ್ಮ ಊರಿನವರು. ನಾನು ಮುಧೋಳ ಠಾಣೆಯಲ್ಲಿ ಪಿರ್ಯಾದಿ ನೀಡಿದ್ದೇನೆ. ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ನಿಪಿ-1 ಅಂತಾ, ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ನಂತರ ಮುಧೋಳ ನ್ಯಾಯಾಲಯದಲ್ಲಿ 164 ರಡಿ ಸಾಕ್ಷಿ ನೀಡಿದ್ದೇನೆ. ಸದರಿ 164 ಸ್ಟೇಟಮೆಂಟನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ತೆಗೆದು ನೋಡಲಾಗಿ, ಅದರ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಲಾಗಿದ್ದು ಸದರಿ 164 ಹೇಳಿಕೆಯನ್ನು ನಿಪಿ-2 ಅಂತಾ, ಅದರ ಮೇಲಿನ ಸಹಿಗಳನ್ನು ನಿಪಿ-2(ಎ) ದಿಂದ (ಡಿ) ಅಂತಾ ಗುರುತಿಸಲಾಯಿತು.

ಕೊಲೆಯಾದ ದಿನ ನಾನು ಮುಧೋಳ ಠಾಣೆಯಲ್ಲಿದ್ದೆ. ಈಗ ನಾನು ಎರಡು ಪೋಟೋಗಳನ್ನು ನೋಡಿದೆ ಅವುಗಳನ್ನು ನಿಪಿ-3 ಮತ್ತು 4 ಅಂತಾ ಗುರುತಿಸಲಾಯಿತು. ದಿನಾಂಕ 15 ರಂದು ತಿಂಗಳು ಗೊತ್ತಿಲ್ಲ. ಅಂದರೆ ಸುಮಾರು 4 ವರ್ಷಗಳ ಹಿಂದೆ ಚಾಸಾ-29 ನನಗೆ ಫೋನ ಮಾಡಿದ ನಾನು ಯಾಕೆ ಎಂದು ಕೇಳಿದಾಗ ನಿನ್ನ ಅಣ್ಣ ಮತ್ತು ಚಿಕ್ಕಪ್ಪ ಇವರನ್ನು ಕೊಲೆ ಮಾಡಲಾಗಿದೆ ಅಂತಾ ಹೇಳಿದರು.

ಇದಕ್ಕಿಂತ ಮೊದಲು ಮೇ ತಿಂಗಳಲ್ಲಿ ನನ್ನ ಹಾಗೂ ನನ್ನ ಎರಡು ಜನ ಸಹೋದರರ ಮನೆಗಳನ್ನು ಮತ್ತು ಎರಡು ಟ್ರ್ಯಾಕ್ಟರಗಳನ್ನು ಧ್ವಂಸ ಮಾಡಿದರು ಹಾಗೂ ನನ್ನ ತಲೆಗೆ ತಲವಾರದಿಂದ ನನಗೆ ಹೊಡೆದಿದ್ದರು ಆ ಬಗ್ಗೆ ನಾನು ಕೇಸು ಹಾಕಿದ್ದೆ. ಆ ಕೇಸಿನಲ್ಲಿ

ಆರೋಪಿತರು ಜೈಲಿನಿದ್ದರು ನಂತರ ಜಾಮೀನಿನ ಮೇಲೆ ಹೊರಗೆ ಬಂದು ಪ್ರೀ ಪ್ಲ್ಯಾನ ಮಾಡಿ ನಾವು ಸುಳ್ಳು ಕೇಸು ಮಾಡಿದ್ದೇವೆ ಎಂದು ಕೊಲೆ ಮಾಡಿದ್ದರು. ಜೀವದ ಭಯ ಇದೆ ಎಂದು ಹೇಳಿ ಎಸ್ ಪಿ ರವರಿಗೆ ಮತ್ತು ಡಿಸಿ ರವರಗೆ ಹಾಗೂ ಸಮಾಜ ಕಲ್ಯಾಣ ಇಲಾಖೆ, ಎಸ್ ಎಸಿ, ಎಸ್ ಟಿ ಕಮೀಷನರ್, ಮಾನವ ಹಕ್ಕುಗಳ ಇಲಾಖೆಗೆ ರವರಿಗೆ ಪತ್ರ ಕೊಟ್ಟಿರುತ್ತೇನೆ. ಇಷ್ಟೆಲ್ಲಾ ಪತ್ರಗಳನ್ನು ಕೊಟ್ಟರೂ ಸಹಿತ ಕೊಲೆಯಾಗಿದೆ. ಸದರಿ ವಿಷಯವನ್ನು ನಾನು ನನ್ನ ಪಿರ್ಯಾದಿಯಲ್ಲಿ ಬರೆದಿಲ್ಲ.

ನಾನು ಮೊದಲು ಮುಧೋಳ ಸಿ ಪಿ ಆಯ್ ಸಾಹೇಬರ ಹತ್ತಿರ ಹೋದೆ. ಅವರು ಮಹೇಶ ಗೌಡನಿಗೆ ಪೋನ ಮಾಡಿದರು, ನಾನು ಆ ದಿನ ನಮ್ಮ ಕುಟುಂಬಕ್ಕೆ ಜೀವ ಬೆದರಿಕೆ ಇದೆ ಅಂತಾ ಹೇಳಲು ಹೋಗಿದ್ದೆ. ಅದು ಯಾವ ದಿನಾಂಕ ಅಂತಾ ನೆನಪಿಲ್ಲ. ನಂತರ ನಾನು ಪಿ ಎಸ್ ಐ ರವರಿಗೆ ಅವರು ಕೊಲೆ ಮಾಡುವ ಹಂತದಲ್ಲಿದ್ದಾರೆ ಅಂತಾ ಹೇಳಿದೆ. ಅದಕ್ಕೆ ಪಿ ಎಸ್ ಐ ರವರು ನಿಮ್ಮನ್ನು ಬದನೆಕಾಯಿ ಮಾಡಿದ್ದಾರೆ ಅಂತಾ ಹೇಳಿದರು.

ಚಾಸಾ-29 ರವರು ಪೋನ ಹಚ್ಚಿದ ನಂತರ ನಾನು ಶಿರೋಳಕ್ಕೆ ಬಂದೆ. ನಾನು ನೋಡಲಾಗಿ ನನ್ನ ಅಣ್ಣನ ಹೆಣ ಎಡಗಡೆ ಬಿದ್ದಿತ್ತು. ಬಲ ತಲೆಯಿಂದ ಬಾಯಿಯವರೆಗೆ ತಲವಾರದಿಂದ ಕೊಯ್ದಿದ್ದರು, ಬಲಗಡೆ ಕುತ್ತಿಗೆಗೆ ತಲವಾರದಿಂದ ಹೊಡೆದಿದ್ದು ಅವನ ಕುತ್ತಿಗೆ ಕತ್ತರಿಸಿ ಎಡಬಾಗಕ್ಕೆ ಸ್ವಲ್ಪ ಹತ್ತಿತ್ತು. ಬಲಗೈಯನ್ನು ಕತ್ತರಿಸಿ ಹಾಕಿದ್ದರು. ಎಡಗೈ ಹಸ್ತ ಕತ್ತರಿಸಿದ್ದರು. ಹಾಗೂ ತಲೆಯಲ್ಲಿ ಸಾಕಷ್ಟು ಗಾಯಗಳು ಆಗಿದ್ದವು. ಹೆಣವನ್ನು ರಸ್ತೆಯ ಪಕ್ಕದಲ್ಲಿರುವ ಸಣ್ಣ ಕೆನಾಲ ನಲ್ಲಿ ಬಿದ್ದಿತ್ತು.

ನಂತರ ನನ್ನ ಚಿಕ್ಕಪ್ಪನ ಹೆಣ ನೋಡಲು ಹೋದೆ ಅವನು ಡಾಂಬರ ರಸ್ತೆಯ ಮೇಲೆ ಅಂಗಾತ ಮಲಗಿದ್ದ, ಅವನ ಎಡಗಡೆ ಕುತ್ತಿಗೆ ಕತ್ತರಿಸಿ ಹೋಗಿ ಬಲ ಕುತ್ತಿಗೆಗೆ ಸ್ವಲ್ಪ ಹತ್ತಿತ್ತು, ಅವನ ಬಲಗಣ್ಣು ಮುಚ್ಚಿತ್ತು ಎಡಗಣ್ಣು ತೆರೆದಿತ್ತು, ಬಾಯಿ ತೆರೆದಿತ್ತು, ಸದರಿ ಹೆಣ ಕಲ್ಲೋಳ ರಸ್ತೆ ಮೇಲೆ ಬಿದ್ದಿತ್ತು. ಅದರ ಪಕ್ಕದಲ್ಲಿ ಶಂಕರ ಮಾಲೂರ ಇವರ ಹೊಲ ಇತ್ತು. ನನ್ನ ಅಣ್ಣನ ಹಾಗೂ ಚಿಕ್ಕಪ್ಪನ ನಾಲ್ಕು ಪೋಟೋಗಳನ್ನು ನೋಡಿ ನಿಪಿ-5 ರಿಂದ 8 ಅಂತಾ ಗುರುತಿಸಲಾಯಿತು.

ನನ್ನ ಅಣ್ಣನ ಮಗಳು ರೇಣುಕಾ ನನಗೆ ಹೇಳಿರುವುದೇನೆಂದರೆ, ಮಲ್ಲಪ್ಪ ಹುದ್ದಾರ, ಶಂಕರ ಗುಡದಿನ್ನಿ, ರಾಜು ಕಡತ, ಅರುಣ ನಾಗರೆಡ್ಡಿ, ಕಿರಣ ನಾಗರೆಡ್ಡಿ, ಕಾಡು ನಾಗರೆಡ್ಡಿ, ಲಕ್ಷ್ಮಣ ಜಕ್ಕಣ್ಣವರ ಹಾಗೂ ಇನ್ನೂ ಜನರು ಇದ್ದರು ಎಲ್ಲರೂ ಸೇರಿ 13 ಜನ ಇದ್ದರು ಅಂತಾ ಹೇಳಿದಳು. ಜಾಗದಲ್ಲಿ ನನ್ನ ಅಣ್ಣನ ಶ್ಯಾಮಸಂಗ ಮೊಬೈಲ ಬಿದ್ದಿತ್ತು ಮತ್ತು ಕಾರಿನ ಪ್ಲೇಟ ನಂಬರ ಇತ್ತು.

ಒಂದು ಸೈಕಲ ಮೋಟರ ಚಾವಿ ಮತ್ತು ಕಾರಿನ ಚಾವಿ ಜಾಗದಲ್ಲಿ ಬಿದ್ದಿದ್ದವು, ಮತ್ತು 2, 3 ಜೊತೆ ಚಪ್ಪಲಿ ಬಿದ್ದಿದ್ದವು.  ಶವವನ್ನು ನನಗೆ ಒಪ್ಪಿಸಿದ್ದಾರೆ. ಆ ಬಗ್ಗೆ ಪೋಟೋ ನಿಪಿ-9 ಅಂತಾ ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಕಾರ ನಂಬರ ಪ್ಲೇಟ ಕೆಎ-25 ಪಿ-7149 ಮು.ಮಾ1 ಅಂತಾ, ಒಂದು ಜೊತೆ ಚಪ್ಪಲ ಮು.ಮಾ-2, ನನ್ನ ಅಣ್ಣನ ಹಿರೋ ಹೋಂಡಾದ ಹೆಡಲೈಟ ಅಸೆಂಬ್ಲಿ ಮು.ಮಾ-3, ನನ್ನ ಅಣ್ಣನ ಕೈವಸ್ತ್ರ ಮು.ಮಾ-4 ಇವುಗಳನ್ನು ನೋಡಿ ಗುರುತಿಸಿದ್ದೇನೆ.

(ಆರೋಪಿತರ ಪರ ಶ್ರೀ ಎಸ್ ಸಿ ಎಚ್ ವಕೀಲರು ಸಿಡ್ಲ್ಯೂ-16 ರಿಂದ 27 ಇವರ ಸಾಕ್ಷಿ ಮುಗಿದ ನಂತರ ಚಾಸಾ-1 ಹಾಗೂ 16,17 ಇವರ  ಪಾಟೀ ಸವಾಲನ್ನು ಒಟ್ಟಿಗೆ ಮಾಡುವ ಕುರಿತು ದಂ.ಸಂ.ಕಲಂ.331(2) ರಲ್ಲಿ ಅರ್ಜಿ ದಾಖಲಿಸಿದ್ದು, ವಿಶೇಷ ಸಾರ್ವಜನಿಕ ಅಭಿಯೋಜಕರು ಆಕ್ಷೇಪಣೆಗೆ ವೇಳೆ ಕೇಳಿದ್ದರಿಂದ ವೇಳೆ ನೀಡಲಾಯಿತು) ಹಾಗೂ  ಪಾಟೀ ಸವಾಲಿಗೆ ವೇಳೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ವಿಶೇಷ ನ್ಯಾಯಾಧೀಶರು,  ಬಾಗಲಕೋಟ.

**Spl.C. No. 3/2020**

ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಿಶೇಷ ಪ್ರಕರಣ ಸಂಖ್ಯೆಃ **03/2020**

| | | | |
|---|---|---|---|
| ಹೆಸರು | : | ಪ್ರಶಾಂತ ಮಲಮೇತ್ರಿ | ಫ್ರಾಸಾ-2 |
| ತಂದೆಯ ಹೆಸರು | : | ಸುರೇಶ | ಚಾಸಾ-3 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಖಾಸಗಿ ನೌಕರಿ | |
| ವಾಸಸ್ಥಳ | : | ಶಿರೋಳ, ತಾ. ಮುಧೋಳ | |

ದಿನಾಂಕಃ 07-08-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು ಮುಧೋಳ ಸರಕಾರಿ ದವಾಖಾನೆಗೆ ಹೋಗಿದ್ದೆ, ದಿಃ 16-10-2019 ರಂದು ಪೋಲೀಸರು ಪಂಚನಾಮೆ ಮಾಡಿಕೊಂಡರು. ಪಂಚನಾಮೆ ಮೇಲೆ ನಾನು ಸಹಿ ಮಾಡಿದ್ದೇನೆ. ಜಾಗದಲ್ಲಿ 2 ಪೋಟೋಗಳನ್ನು ತೆಗೆದುಕೂಂಡಿದ್ದಾರೆ. ಪಂಚನಾಮೆಯನ್ನು ನಿಪಿ-10 ಅಂತಾ, ಸಹಿಯನ್ನು ನಿಪಿ-10(ಎ) ಅಂತಾ ಗುರುತಿಸಲಾಯಿತು. ಎರಡು ಪೋಟೋಗಳನ್ನು ನಿಪಿ-11 ಮತ್ತು 12 ಅಂತಾ ಗುರುತಿಸಲಾಯಿತು. ನಿಪಿ-9 ರಲ್ಲಿ ನನ್ನ ಪೋಟೋ ಇದ್ದು ಅದನ್ನು ನೋಡಿ ಗುರುತಿಸಿದ್ದೇನೆ. ಪಂಚನಾಮೆಯನ್ನು 1-00 ಗಂಟೆಯಿಂದ 2-00 ಗಂಟೆಯವರೆಗೆ ವಿಠ್ಠಲರವರ ಶವ ಪಂಚನಾಮೆ ಮಾಡಿದ್ದಾರೆ.

2-30 ರಿಂದ 3-00 ಗಂಟೆಯವರೆಗೆ ಮಳೆಪ್ಪ ಇವರ ಶವ ಪಂಚನಾಮೆ ಜರುಗಿಸಿದ್ದಾರೆ. ಸದರಿ ಪಂಚನಾಮೆ ಮೇಲೆ ಸಹಿ ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ನಿಪಿ-13 ಮತ್ತು ಸಹಿಯನ್ನು ನಿಪಿ-13(ಎ) ಅಂತಾ ಗುರುತಿಸಲಾಯಿತು.

ಪಾಟಿಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಸಿ ಎಚ್ ಅವರಿಂದಃ

ಪಂಚನಾಮೆಗೆ ಪೋಲೀಸರು ಕರೆದಿದ್ದರು. ಪಂಚನಾಮೆಯಲ್ಲಿ ಹೀಗೆಯೇ ಬರೆಯಬೇಕೆಂದು ಪೋಲೀಸರಿಗೆ ನಾನು ಹೇಳಿಕೆ ನೀಡಿಲ್ಲ. ಪಂಚನಾಮೆ ಯಾರು ಬರೆದರು ಗೊತ್ತಿಲ್ಲ. ಪಂಚನಾಮೆಯನ್ನು ಸರಕಾರಿ ದವಾಖಾನೆಯಲ್ಲಿ ಮಾಡಿದ್ದೇನೆ. ಚಾಸಾ-1 ನನ್ನ ಚಿಕ್ಕಪ್ಪ. ಚಾಸಾ-1 ರವರ ಮಾತು ಕೇಳಿಕೊಂಡು ನಾನು ಪಂಚನಾಮೆಗೆ ಹೋಗಿ ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತೇನೆಂದರೆ ಸರಿಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**